ಇಂದು ದಿ**: 30.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಪಾಟೀ ಸವಾಲುಃ **2** ನೇ ಪ್ರತಿವಾದಿಯ ಪರಃ ಶ್ರೀ ಆರ್ ಎಸ್ ಎಂ ವಕೀಲರಿಂದ

ಈ ದಾವೆಯನ್ನು ಯಾರ ಯಾರ ವಿರುದ್ದ ಸಲ್ಲಿಸಿರುತ್ತಾರೆ ಎಂದು ಗೊತ್ತಿಲ್ಲ. ಆಸ್ತಿ ಕೊಡಲಿ ಎಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ. ಎಷ್ಟು ಸ್ವತ್ತುಗಳ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಅವುಗಳ ಸರ್ವೆ ನಂ. ವಿಸ್ತೀರ್ಣ ಮತ್ತು ಚೆಕ್ ಬಂದಿ ಹೇಳಲು ಆಗುವುದಿಲ್ಲ. ಅವುಗಳಿಗೆ ಸಂಬಂಧಿಸಿದಂತೆ ಸರ್ವೇ ನಂ. ನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ವಾದಿಯ ಕುಟುಂಬದವರು ಪರಿಚಯ ಇರುತ್ತಾರೆ. ವಾದಿಗಳು ಮತ್ತು 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಮಕ್ಕಳು ಎನ್ನುವುದು ನಿಜ. 1 ನೇ ಪ್ರತಿವಾದಿಗೆ ರಾಮಪ್ಪ ಎಂಬ ಒಬ್ಬ ಸಹೋದರ ಇರುತ್ತಾನೆ. ಸದರಿ ರಾಮಪ್ಪ ಮತ್ತು ಶಿವಣ್ಣ ಇವರ ತಂದೆ ಹೆಸರು ಹೇಳಲು ಆಗುವುದಿಲ್ಲ. ಅವರ ತಂದೆಯ ಹೆಸರು ಹನುಮಂತಪ್ಪ ಎನ್ನುವುದು ನಿಜ. ಸದರಿ ಹನುಮಂತಪ್ಪ ಇವರು ಎಷ್ಟು ಜನ ಅಣ್ಣತಮ್ಮಂದಿರು ಎಂದು ಹೇಳಲು ಆಗುವುದಿಲ್ಲ. ಸದರಿ ಹನುಮಂತಪ್ಪ ಇವರ ತಂದೆಯ ಹೆಸರು ಸಣ್ಣತಿಮ್ಮಪ್ಪ ಎನ್ನುವುದು ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ಹನುಮಂತಪ್ಪನ ಮಗ ಎನ್ನುವುದು ನಿಜ. ದಾವಾ 1 ರಿಂದ 3 ಮತ್ತು 5 ನೇ ಆಸ್ತಿಗಳ ಪಹಣಿ ಈಗಲೂ ಸಹ ರಾಮಪ್ಪ ಮತ್ತು ಶಿವಣ್ಣ ತಂದೆ ಹನುಮಂತಪ್ಪ ಇವರ ಹೆಸರಿನಲ್ಲಿ ಜಂಟಿಯಾಗಿ ಇರುತ್ತವೆ ಎನ್ನುವುದು ನಿಜ. ಸದರಿ ಆಸ್ತಿಗಳು ಪಿತ್ರಾರ್ಜಿತವಾದ ಆಸ್ತಿಗಳು ಎನ್ನುವುದು ನಿಜ. ದಾವಾ ತಪಶೀಲಿನ 6 ನೇ ಆಸ್ತಿಯನ್ನು 1 ನೇ ಪ್ರತಿವಾದಿ ಕ್ರಯಕ್ಕೆ ತೆಗೆದುಕೊಂಡಿರುತ್ತಾನೆ ಎನ್ನುವುದು ಗೊತ್ತಿರವುದಿಲ್ಲ. ರಾಮಣ್ಣ ಮತ್ತು ಶಿವಣ್ಣ ಭಾಗ ಮಾಡಿಕೊಂಡಿರುವ ವಿಷಯ ಗೊತ್ತು. ಸದರಿ ಶಿವಣ್ಣ ಇವನಿಗೆ ಇಬ್ಬರು ಹೆಂಡತಿಯರು. ಮೊದಲನೆ ಹೆಂಡತಿಯ ಹೆಸರು ಗೌರಮ್ಮ. ಸದರಿ ಗೌರಮ್ಮ ಮೃತಪಟ್ಟ ನಂತರ ಪ್ರತಿವಾದಿ 1(ಎ) ಇವಳನ್ನು ಮದುವೆ ಆಗಿರುತ್ತಾನೆ ಎನ್ನುವುದು ನಿಜ. ಅವರ ವಂಶದಲ್ಲಿ ಮರುಳಪ್ಪ ಎನ್ನುವವರು ಯಾರು ಇಲ್ಲ ಎನ್ನುವುದು ನಿಜ. ಮರುಳಪ್ಪ ಮತ್ತು ಅವನ ಹೆಂಡತಿ ಮರುಳಮ್ಮ ಎನ್ನುವವರು ಅವರ ವಂಶದಲ್ಲಿ ಯಾರು ಇಲ್ಲ ಎನ್ನುವುದು ನಿಜ. ವಾದಿ ಮತ್ತು ಪ್ರತಿವಾದಿಗಳು ಹನುಮಂತಪ್ಪನ ವಾರಸುದಾರರು ಎನ್ನುವುದು ನಿಜ. ಪ್ರತಿವಾದಿ 4 ರಿಂದ 6 ರವರು ಸಣ್ಣತಿಮ್ಮಪ್ಪನ ವಾರಸುದಾರರು ಎನ್ನುವುದು ನಿಜ. 4 ರಿಂದ 6 ಪ್ರತಿವಾದಿಗಳು 1 ರಿಂದ 3 ಮತ್ತು 5 ನೇ ದಾವಾ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಅವರ ಭಾಗಕ್ಕೆ ಬಂದಿರುತ್ತವೆ ಎನ್ನುವುದು ನಿಜ. ದಾವಾ 4 ನೇ ಆಸ್ತಿಯ ದಾಖಲೆಯನ್ನು ನಾನು ನೋಡಿಲ್ಲ. ದಾವಾ 4 ನೇ ಆಸ್ತಿ ಮೂಲತಃ ಮರುಳಪ್ಪ ಇವರಿಗೆ ಸೇರಿದ್ದು ಎನ್ನುವುದು ಗೊತ್ತಿರುವುದಿಲ್ಲ. ಸದರಿ ಮರುಳಪ್ಪ ಮೃತಪಟ್ಟ ನಂತರ 4 ನೇ ಆಸ್ತಿಯು ಅವನ ಹೆಂಡತಿ ಮರುಳಮ್ಮ ಇವಳಿಗೆ ಬಂದಿತ್ತು ಎನ್ನುವುದು ನಿಜ. ನಿಪಿಃ 11 ಶಿವಣ್ಣ ಬಿನ್ ಲೇಟ್ ಮರುಳಪ್ಪ ಇವರ ಹೆಸರಿಗೆ ಇರುತ್ತದೆ ಎನ್ನುವುದು ನಿಜ. ದಾವಾ 4 ನೇ ಆಸ್ತಿ ಹನುಮಂತಪ್ಪನ

ಹೆಸರಿಗೆ ಇತ್ತು ಎನ್ನುವುದಕ್ಕೆ ದಾಖಲೆಯನ್ನು ನೋಡಿಲ್ಲ. ದಾವಾ 4 ನೇ ಆಸ್ತಿಯು ಮರುಳಮ್ಮ ಗಂಡ ಮರುಳಪ್ಪ ಇವಳಿಗೆ ಸೇರಿದ್ದು ಎನ್ನುವುದು ನಿಜ. ದಾವಾ 4 ನೇ ಆಸ್ತಿಯನ್ನು ಶಿವಣ್ಣ ಇವನು ದಿ: 15.02.2022 ರಂದು 2 ನೇ ಪ್ರತಿವಾದಿಗೆ ಕ್ರಯ ಪತ್ರದ ಮೂಲಕ ಬರೆದುಕೊಟ್ಟಿರುತ್ತಾನೆ ಎನ್ನುವುದು ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿಯನ್ನು ವಿವಾಹ ಮಾಡಿಕೊಟ್ಟು 9 ವರ್ಷ ಆಗಿರುತ್ತದೆ. ಸದರಿ 2 ನೇ ಪ್ರತಿವಾದಿ ಮತ್ತು ಅವಳ ಗಂಡ ಬೆಂಗಳೂರಿನಲ್ಲಿ ಪಂಚರ್ ಅಂಗಡಿಯನ್ನು ಇಟ್ಟುಕೊಂಡಿರುತ್ತಾರೆ ಎನ್ನುವುದು ನಿಜ. ದಾವಾ 4 ನೇ ಆಸ್ತಿಯನ್ನು 2 ನೇಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ಶಿವಣ್ಣ ತಂದೆ ಮರುಳಪ್ಪ ಇವರಿಂದ ಖರೀದಿಸಿದ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ 4 ನೇ ಆಸ್ತಿ ವಾದಿ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತವಾದ ಆಸ್ತಿ ಅಲ್ಲ ಎನ್ನುವುದು ಗೊತ್ತಿರುವುದಿಲ್ಲ. ನನಗೆ ಯಾವುದೇ ವಿಷಯ ಗೊತ್ತಿಲ್ಲದೆ ಇದ್ದರು ಸಹ 2 ನೇ ಪ್ರತಿವಾದಿಯ ಆಸ್ತಿಯಲ್ಲಿ ಭಾಗ ಕೊಡಿಸಬೇಕು ಎನ್ನುವ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು **1**(ಎ) ಪ್ರತಿವಾದಿಯ ಪರ: ಶ್ರೀ ಟಿ ಆರ್ ಎಸ್ ವಕೀಲರು ಕಾಲಾವಕಾಶವನ್ನು ಕೋರಿದ್ದು, ಆದರೆ **1**(ಎ) ಪ್ರತಿವಾದಿ ಲಿಖಿತ ಹೇಳಿಕೆಯನ್ನು ಸಲ್ಲಿಸದ ಕಾರಣ, ಕೋರಿಕೆಯನ್ನು ತಿರಸ್ಕರಿಸಿ ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.</u>

**<u>ಮರುವಿಚಾರಣೆ: ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.